ಈ) ನಾಲ್ಕು ಸಂಸ್ಥೆಗಳ ವಿವರಗಳನ್ನು ಕೊಡಲಾಗಿದೆ.

೧)	ಸ್ವಾಮಿ ಶಿವಾನಂದ ಸೇವಾಶ್ರಮ ಎಜ್ಯುಕೇಷನ್ ಸೊಸೈಟಿ, ತೊಡೆಬಾವಿ, ಕೋಲಾರ ಜಿಲ್ಲೆ	... ಕಿಟಿಕಿಯವರೆಗೆ ಕಟ್ಟಲಾಗಿದೆ. (ಲಿಂಟಲ್ ಲೆವಲ್)
೨)	ಅಲ್ಸಾಯನ್ ಬಾಯ್ಸ್ ಹೋಂ ನೆಹರುನಗರ ಕೊಟ್ಟಿಕಾರ್, ಮಂಗಳೂರು	... ಭೂಪಟ್ಟದವರೆಗೆ ಬಂದಿರುತ್ತೆ.
೩)	ಶ್ರೀ ಶಿವಯೋಗೀಶ್ವರ ಪ್ರಸಾದ ನಿಲಯ, ಹಂಸಭಾವಿ, ಧಾರವಾಡ ಜಿಲ್ಲೆ	... ಪೂರ್ಣಗೊಳ್ಳುವ ಸ್ಥಿತಿಯಲ್ಲಿದೆ.
೪)	ಅಭಯ ಆಶ್ರಯ, ಅಸಯಗೋಳ್ ಕೋನಹೆ, ಮಂಗಳೂರು	... ಸಂಸ್ಥೆಯವರು ಅಂದಾಜು ಪಟ್ಟಿಯನ್ನು ಪುನರ್‌ಪರಿಶೀಲನೆಗೆ ಕಳುಹಿಸಿರುವುದರಿಂದ ಕಟ್ಟಡದ ಕೆಲಸವನ್ನು ಇನ್ನೂ ಪ್ರಾರಂಭಿಸಿಲ್ಲ.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ಹಿರೇಕೇರೂರು ತಾಲ್ಲೂಕಿನ ಭೈರನಪಾದ ಏತ ನೀರಾವರಿ ಯೋಜನೆ ಬಗ್ಗೆ

೧೧೨೬. ಶ್ರೀ ಕೆ. ಬಿ. ಕೋಳಿವಾಡ್ (ರಾಣೇಬೆನ್ನೂರು).— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನ ಭೈರನಪಾದ ಏತ ನೀರಾವರಿ ಯೋಜನೆಯ ಅಡಿಯಲ್ಲಿ ಅಂದಾಜು ಮಾಡಲಾದ ಒಟ್ಟು ನೀರಾವರಿ ಕ್ಷೇತ್ರ?

ಆ) ಮೇಲೆ ಹೇಳಲಾದ ಯೋಜನೆಯ ಅಡಿಯಲ್ಲಿ ಈಗ ನೀರಾವರಿ ಆಗುತ್ತಿರುವ ಕ್ಷೇತ್ರದ ಒಟ್ಟು ವಿಸ್ತೀರ್ಣವೆಷ್ಟು ?

ಇ) ಅಚ್ಚುಕಟ್ಟು ಪ್ರದೇಶದ ಅಡಿಯಲ್ಲಿ ಸುಮಾರು ೧೦೦೦ ಎಕರೆಗಳಿಗೆ ನೀರಾವರಿ ಆಗದಿರಲು ಕಾರಣಗಳೇನು ?

ಈ) ಯೋಜನೆಯನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲು ತೆಗೆದುಕೊಂಡ ಕ್ರಮಗಳು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೬೧೫ ಹೆಕ್ಟೇರುಗಳು (ಮುಂಗಾರು ಮತ್ತು ಹಿಂಗಾರು ಎರಡು)

ಆ) ೧೯೮೪-೮೫ರ ಮುಂಗಾರಿನಲ್ಲಿ ೨೪೧ ಹೆಕ್ಟರ್ ಮತ್ತು ಹಿಂಗಾರಿನಲ್ಲಿ ೨೦೨ ಹೆಕ್ಟರ್‌ಗಳಲ್ಲಿ ನೀರಾವರಿಯಾಗಿದೆ.

ಇ) ಕಾರಣಗಳು

೧) ಕಾಲುವೆಯಲ್ಲಿ ಹಾದು ಹೋಗುವಾಗ ಆಗುವ ನೀರಿನ ನಷ್ಟ

೨) ಕಡಿಮೆ ವೋಲ್ಟೇಜು ಮತ್ತು ಆಗಿಂದಾಗ್ಗೆ ಸಂಭವಿಸುವ ವಿದ್ಯುತ್ ಕಡಿತಗಳಿಂದ ಪಂಪುಗಳ ಹಗಲು ಹೊತ್ತು ತಡೆಯಿಲ್ಲದೆ ಓಡಲಾಗದಿರುವುದು.

೩) ರೈತರು ಜಮೀನನ್ನು ಪಟ್ಟ ಮಾಡಿಕೊಳ್ಳದಿರುವುದು.

ಈ) ಕೈಕೊಂಡ ಕ್ರಮಗಳು.—

೧) ಕಾಲುವೆಯಂದ್ದಕ್ಕೂ ಲೈನಿಂಗ್ ಕೆಲಸವನ್ನು ೧೯೮೪ರಿಂದ ಹಂತಗಳಲ್ಲಿ ಹಣಕಾಸಿನ ಲಭ್ಯತೆಯನ್ನವಲಂಬಿಸಿ ತೆಗೆದುಕೊಳ್ಳಲಾಗಿದೆ.

೨) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಅವರಿಗೆ ತಡೆಯಿಲ್ಲದೆ ವಿದ್ಯುತ್ ಸರಬರಾಜಿಗೆ ಕೋರಲಾಗಿದೆ.

೩) ರೈತರು ತಮ್ಮ ಜಮೀನನ್ನು ಪಂಟ್ಟ ಮಾಡಿಕೊಳ್ಳಲು ಮತ್ತು ರಾತ್ರಿ ವೇಳೆಯಲ್ಲಿ ನೀರು ಪಡೆಯಲೂ ಮನ ಒಲಿಸಲಾಗಿತ್ತಿದೆ.

ಹೊಸ ಲೋಕೋಪಯೋಗಿ ಕಾಮಗಾರಿಗಳ ಕುರಿತು

೧೦೨೭. ಶ್ರೀ ಟಿ.ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫–೮೬ರ ಆಯವ್ಯಯದಲ್ಲಿ ಹೊಸದಾಗಿ ಸೇರಿಸಲಾದ ಲೋಕೋಪಯೋಗಿ ಕಾಮಗಾರಿಗಳ ಸಂಖ್ಯೆ ಎಷ್ಟು?

ಆ) ೧೯೮೪–೮೫ರ ಆಯವ್ಯಯದಲ್ಲಿ ಸೇರಿಸಲಾಗಿದ್ದ ಮತ್ತು ಈಗ ಕೈಬಿಟ್ಟ ಲೋಕೋಪಯೋಗಿ ಕಾಮಗಾರಿಗಳ ಸಂಖ್ಯೆ ಎಷ್ಟು?

ಇ) ಆ ಕೆಲಸಗಳನ್ನು ಕೈಬಿಡಲು ಕಾರಣಗಳೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ರಸ್ತೆ ಮತ್ತು ಸೇತುವೆ ಕೆಲಸಗಳು ... ೫೪

ಕಟ್ಟಡದ ಕೆಲಸಗಳು ... ೨೨

ಒಟ್ಟು ೭೬

ಆ) ರಸ್ತೆ ಮತ್ತು ಸೇತುವೆಗಳು ... ೧೦೭೦

ಕಟ್ಟಡದ ಕೆಲಸಗಳು ಇಲ್ಲ

ಇ) ಸಾಕಷ್ಟು ಹಣದ ಲಭ್ಯತೆ ಇಲ್ಲದಿರುವುದರಿಂದ

ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಭೀಮಾ ನದಿಯಿಂದ ವಿತ ನೀರಾವರಿ

೧೪೭೭. ಶ್ರೀ ಎನ್.ಎಸ್. ಕೇಡ್ (ಇಂಡಿ).—ಮಾನ್ಯ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಭೀಮಾ ನದಿಗೆ ಕೈಗೊಳ್ಳಲಾಗಿರುವ ವಿತ ನೀರಾವರಿ ಯೋಜನೆಗಳ ಸಂಖ್ಯೆ

ಆ) ಈ ಯೋಜನೆಗಳಲ್ಲಿ ಎಷ್ಟು ವಿಸ್ತೀರ್ಣ ಒಳಪಡುತ್ತದೆ.

ಇ) ಇವುಗಳಲ್ಲಿ ಯಾವುದಾದರು ಯೋಜನೆಗಳು ವೈಫಲ್ಯಗೊಂಡಿವೆಯೆ, ಹಾಗಿದ್ದಲ್ಲಿ ಇದಕ್ಕೆ ಜವಾಬ್ದಾರರಾದ ವ್ಯಕ್ತಿಗಳು ಯಾರು?

ಈ) ಈ ಯೋಜನೆಗಳು ಪರಿಣಾಮಕಾರಿಯಾಗಲು ಸರ್ಕಾರವು ತೆಗೆದುಕೊಳ್ಳಬೇಕೆಂದಿರುವ ಕ್ರಮಗಳು?